# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

| Vol.46 | No:28 | ENGLISH DAILY | Subscription Yearly - Rs. - | TUESDAY | 17-8-2021 |
|---|---|---|---|---|---|



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಜುಲೈ ತಿಂಗಳಲ್ಲಿ ಭಾರತದ ಪಾಮೆಣ್ಣೆ ಆಮದು 43 ಶೇಕಡಾ ಇಳಿಕೆ.

ಜುಲೈ ತಿಂಗಳಲ್ಲಿ ಭಾರತದ ಪಾಮೆಣ್ಣೆ ಆಮದು 43 ಶೇಕಡಾ ಇಳಿಕೆಯಾಗಿ ಹಿಂದಿನ 5 ತಿಂಗಳಲ್ಲಿ ಕನಿಷ್ಠ ಆಮದಾಗಿದೆಯೆಂದು ಸಾಲ್ವೆಂಟ್ ಎಕ್ಸ್ ಟ್ರಾಕ್ಷನ್ಸ್ ಅಸೋಸಿಯೇಶನ್ ಆಫ್ ಇಂಡಿಯ ಹೇಳಿಕೆ. ಜುಲೈ ತಿಂಗಳ ಭಾರತದ ಪಾಮೆಣ್ಣೆ ಆಮದು 465,606 ಟನ್ ಗಳಿಗೆ ಇಳಿಕೆಯಾಗಿದ್ದು, ಸೋಯ ಎಣ್ಣೆ ಆಮದು 22 ಶೇಕಡಾ ಇಳಿಕೆಯಾಗಿ 379,892 ಟನ್ ಗಳಾಗಿವೆ. ಸೂರ್ಯಕಾಂತಿ ಎಣ್ಣೆ ಆಮದು 66 ಶೇಕಡಾ ಇಳಿಕೆಯಾಗಿ 71,838 ಟನ್ ಗಳು ಆಮದಾಗಿದೆ. ಖಾದ್ಯ ತೈಲಗಳ ಆಮದು ಆಗಸ್ಟ್ ತಿಂಗಳಲ್ಲಿ ಹೆಚ್ಚಳವಾಗಬಹುದೆಂದು ಮುಂಬಯಿಯ ಖಾದ್ಯ ತೈಲ ಡೀಲರ್ ಹೇಳಿದ್ದಾರೆ. ಬೇಡಿಕೆ ಹೆಚ್ಚಳವಾಗುತ್ತಿದೆಯೆನ್ನಲಾಗಿದೆ.

## ಅಂತರಾಷ್ಟ್ರೀಯ ಸಕ್ಕರೆ ದರ ಹೆಚ್ಚಳ

ಪ್ರತಿಕೂಲ ಹವಾಮಾನದಿಂದ ಪ್ರಮುಖ ಅಂತರಾಷ್ಟ್ರೀಯ ಉತ್ಪಾದಕ ಬ್ರೆಜಿಲ್ ನ ಉತ್ಪಾದನೆ ಅಂದಾಜು ಗಣನೀಯ ಇಳಿಕೆಯಾಗುತ್ತಿರುವುದರಿಂದ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಕ್ಕರೆ ಫ್ಯೂಚರ್ ದರ ಹೆಚ್ಚಳವಾಗುತ್ತಿದೆ. ಕಚ್ಚಾ ಸಕ್ಕರೆ ಅಂತರಾಷ್ಟ್ರೀಯ ಬೇಡಿಕೆ ಹೆಚ್ಚಳವಿರುವುದರಿಂದ ಸಕ್ಕರೆ ಕಾರ್ಖಾನೆಗಳು ಕಚ್ಚಾ ಸಕ್ಕರೆ ಉತ್ಪಾದನೆಗೆ ಗಮನ ಕೇಂದ್ರೀಕರಿಸಿವೆಯೆನ್ನಲಾಗಿದೆ.